ಆದರೆ ಈಗ ಅವರು ಈ ಸದನದಲ್ಲಿ ಇಲ್ಲ. ಇಂತಹ ವಿಚಾರಗಳನ್ನೇ ನಾವು ಚರ್ಚೆ ಮಾಡುತ್ತಾ ಹೋಗುವುದು ಬೇಡ. ಅವರ ಬಗ್ಗೆ ಬೇಕಾದರೆ ಪಬ್ಲಿಕ್ ಮೀಟಿಂಗ್ ವ್ಯವಸ್ಥೆ ಮಾಡಿ ಅಲ್ಲ. ವಾಟಾಳ್ ನಾಗರಾಜ್ ಬೇಕಾದಷ್ಟು ಮಾಡಲಿ. ಅವರಿಗೆ ಪತ್ರ ಬರೆದು ಖಂಡನೆ ಮಾಡುವ ವಿಚಾರದಲ್ಲಿ ನಾವೆಲ್ಲಾ ಸೇರೋಣ. ಸದನದಲ್ಲಿ ಚರ್ಚೆ ಗೌರವ ತೋರಿಸುವುದು ಬೇಡ, ಅದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ತಮಗೆ ಹಕ್ಕುಚ್ಯುತಿ ನೋಟೀಸ್ ಕಳುಹಿಸುತ್ತೇನೆ.

ಅಧ್ಯಕ್ಷರು : ತಾವು ಹಕ್ಕುಚ್ಯುತಿ ನೋಟೀಸ್ ಕಳುಹಿಸಿಕೊಡಿ.

ಗಮನ ಸೆಳೆಯುವ ಸೂಚನೆಗಳು

ಅ) ವಿಷಯ : ಬೀದರ್ ನಗರದಲ್ಲಿರುವ ಹಳೆಯ ಬಸ್ ನಿಲ್ದಾಣಕ್ಕೆ ಬಸ್ಸುಗಳು ಬರುತ್ತಿಲ್ಲವಾದ್ದರಿಂದ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆ.

ಶ್ರೀ ಸೈಯದ್ ಜುಲ್ಫೀಕರ್ ಹಷ್ಮಿ(ಬೀದರ್) : ಮಾನ್ಯ ಅಧ್ಯಕ್ಷರೆ, ಬೀದರ್ ನಗರದಲ್ಲಿರುವ ಹಳೆಯ ಬಸ್ ನಿಲ್ದಾಣಕ್ಕೆ ಬಸ್ಸುಗಳು ಬರುತ್ತಿಲ್ಲವಾದ್ದರಿಂದ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಮಾನ್ಯ ಸಾರಿಗೆ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ.ಎಸ್.ಬೀಳಗಿ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೇ, 1956ರಲ್ಲಿ ರಾಜ್ಯಗಳ ಪುನರ್‌ವಿಂಗಡಣೆಯಾದ ನಂತರ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಯಾಣಿಕರ ಸಾರಿಗೆ ವ್ಯವಸ್ಥೆಯನ್ನು ಒದಗಿಸುತ್ತಿದ್ದ ನಿಜಾಂ ರಾಜ್ಯ ರಸ್ತೆ ಸಾರಿಗೆ ಇಲಾಖೆ 1956ನೇ ನವಂಬರ್ 1ರಂದು ಅಂದಿನ ಮೈಸೂರು ಸರ್ಕಾರ ರಸ್ತೆ ಸಾರಿಗೆ ಇಲಾಖೆಯೊಂದಿಗೆ ವಿಲೀನಗೊಳಿಸಲಾಯಿತು. ವಿಲೀನ ಹೊಂದುವ ಮುನ್ನ ಹುಮ್ನಾಬಾದ್, ಗುಲ್ಬರ್ಗ, ಲಿಂಗಸಗೂರು ಮತ್ತು ರಾಯಚೂರಿನ ನಾಲ್ಕು ಘಟಕಗಳ ಮೂಲಕ ಪ್ರದೇಶದಲ್ಲಿ 101 ಬಸ್ಸುಗಳು ಸಂಚರಿಸುತ್ತಿದ್ದವು.

ವಿಲೀನದ ನಂತರ ಆ ಪ್ರದೇಶದಲ್ಲಿನ ಅಗತ್ಯ ಮತ್ತು ಮೋಟಾರು ವಾಹನ ಸಂಚಾರ ಯೋಗ್ಯ ರಸ್ತೆಗಳ ಅಭಿವೃದ್ಧಿಯನ್ನಾದರಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸುತ್ತಾ ಬಂತು. ಬೀದರ್ ಒಂದು ಜಿಲ್ಲಾ ಕೇಂದ್ರವಾಗಿದ್ದರೂ ಸಹ ನಿಜಾಂ ರಾಜ್ಯ ರಸ್ತೆ ಸಾರಿಗೆ ಇಲಾಖೆ ಅಲ್ಲಿ ಒಂದು ಬಸ್ ನಿಲ್ದಾಣವನ್ನಾಗಲಿ ಅಥವಾ ಒಂದು ಬಸ್ ಘಟಕವನ್ನಾಗಲಿ ಸ್ಥಾಪಿಸಿರಲಿಲ್ಲ.

ಜಿಲ್ಲೆಯಲ್ಲಿ ಉತ್ತಮ ಸಾರಿಗೆ ವ್ಯವಸ್ಥೆಯನ್ನು ಒದಗಿಸುವ ಸಲುವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬೀದರ್‌ನಲ್ಲಿ ಒಂದು ಬಸ್ ನಿಲ್ದಾಣ ಮತ್ತು ಒಂದು ಘಟಕ ನಿರ್ಮಿಸಲು 23125 ಚದರ ಅಡಿಗಳ (21 ಗುಂಟೆಗಳು) ಜಮೀನನ್ನು ಪುರಸಭೆಯಿಂದ ಖರೀದಿಸಿತು ಮತ್ತು ಸದರಿ ಜಮೀನಿಗೆ ಹೊಂದಿಕೊಂಡಂತೆ 1 ಏಕರೆ 35 ಗುಂಟೆಗಳ ವಿಸ್ತೀರ್ಣವುಳ್ಳ ಖಾಸಗೀ ಜಮೀನನ್ನು ದಿನಾಂಕ 26-9-1963ರಂದು ಸ್ವಾಧೀನ ಪಡಿಸಿಕೊಂಡಿತು.

ಸದರಿ 2 ಏಕರೆ 16 ಗುಂಟೆ ಪ್ರದೇಶದ ಒಂದು ಏಕರೆಯನ್ನು ಬಸ್ ನಿಲ್ದಾಣ ನಿರ್ಮಿಸಲು ಉಪಯೋಗಿಸಿಕೊಂಡು ಉಳಿದ 1 ಏಕರೆ 16 ಗುಂಟೆ ಪ್ರದೇಶವನ್ನು ಚಿಕ್ಕ ಘಟಕವನ್ನು ನಿರ್ಮಿಸುವ ಸಲುವಾಗಿ ಕಾದಿರಿಸಲಾಯಿತು. 1963ರಲ್ಲಿ ಬೀದರ್ ಬಸ್‌ನಿಲ್ದಾಣದಿಂದ ಸುಮಾರು 50 ಬಸ್ಸುಗಳ ಸಂಚಾರ ನಿರ್ವಹಣೆ ಮಾಡುತ್ತಿದ್ದವು. ಅವುಗಳು ಹುಮ್ನಾಬಾದ್ ಮತ್ತು ಗುಲ್ಬರ್ಗಾದಲ್ಲಿನ ಘಟಕಗಳಿಂದ ಕಾರ್ಯಾಚರಣೆ ನಿರ್ವಹಿಸುತ್ತಿದ್ದವು.

ತದನಂತರ, ಬೀದರ್ ಜಿಲ್ಲೆಯಲ್ಲಿ ರಸ್ತೆಗಳ ಅಭಿವೃದ್ಧಿಯಾದಂತೆ, ಹೆಚ್ಚು ಹೆಚ್ಚು ಗ್ರಾಮಗಳಿಗೆ ಬಸ್ ಸಂಪರ್ಕಗಳನ್ನೂ ಸಹ ಪ್ರಾರಂಭಿಸಲಾಯಿತು. ಬಸ್ಸುಗಳ ಸಂಖ್ಯೆ ಗಮನಾರ್ಹವಾಗಿ ಬೆಳೆಯಿತು. ಇದರಿಂದಾಗಿ ಬಸ್ ನಿಲ್ದಾಣವು ಇಕ್ಕಟ್ಟಾಯಿತು. ಮತ್ತು ಕಿಷ್ಕಿಂದ ಹೆಚ್ಚಾಯಿತು. ಜಿಲ್ಲೆಯಲ್ಲಿನ ಬಸ್ ಸಂಚಾರ ವ್ಯವಸ್ಥೆಯನ್ನು ಉತ್ತಮಪಡಿಸುವ ಸಲುವಾಗಿ ಬಸ್ ನಿಲ್ದಾಣದ ಹಿಂಭಾಗದಲ್ಲಿನ 1 ಎಕರೆ ಮತ್ತು 16 ಗುಂಟೆ ಭೂಮಿಯಲ್ಲಿ ಒಂದು ಚಿಕ್ಕ ಘಟಕವನ್ನು ದಿನಾಂಕ 21-10-1981ರಂದು ಪ್ರಾರಂಭಿಸಲಾಯಿತು. ಒಂದು ವಿಶಾಲವಾದ ಬಸ್ ಘಟಕ ಮತ್ತು ಒಂದು ಬಸ್ ನಿಲ್ದಾಣವನ್ನು ನಿರ್ಮಿಸುವುದು ಅಗತ್ಯವೆಂದು ಸಂಸ್ಥೆಯು ಮನಗಂಡಿತು. ಅದರಂತೆಯೇ ಸರ್ವೇ ನಂಬರ್ 27:1ರಲ್ಲಿ 12 ಎಕರೆ ಮತ್ತು 20 ಗುಂಟೆಗಳ ವಿಸ್ತೀರ್ಣವುಳ್ಳ ಭೂಮಿಯನ್ನು ದಿನಾಂಕ 21-2-79ರಂದು ಸ್ವಾಧೀನ ಪಡಿಸಿಕೊಳ್ಳಲಾಯಿತು.

1985ರಲ್ಲಿ ಜಿಲ್ಲೆಯಲ್ಲಿನ ಬಸ್ ಮಾರ್ಗಗಳನ್ನು ರಾಷ್ಟ್ರೀಕರಣ ಗೊಳಿಸಲಾಯಿತು. ದಿನಾಂಕ 7-11-1985ರಂದು ರಾಷ್ಟ್ರೀಕರಣ ಯೋಜನೆಯನ್ನು ಕಾರ್ಯಗತಗೊಳಿಸಿದ ನಂತರ ಘಟಕ ಮತ್ತು ಬಸ್ ನಿಲ್ದಾಣಗಳಲ್ಲಿನ ಇಕ್ಕಟ್ಟು ಮತ್ತಷ್ಟು ಹೆಚ್ಚಾಯಿತು. ಇದನ್ನು ನಿವಾರಿಸಲು ಮತ್ತು ಭವಿಷ್ಯತ್ತಿನ ಅಗತ್ಯವನ್ನು ಪೂರೈಸುವ ಸಲುವಾಗಿ ಒಂದು ವಿಶಾಲವಾದ ಘಟಕವನ್ನು ಮತ್ತು ಮಾದರಿ ಬಸ್ ನಿಲ್ದಾಣವನ್ನು ನಿರ್ಮಿಸಲು ತೀರ್ಮಾನಿಸಲಾಯಿತು. ಅದರಂತೆಯೆ ಸರ್ವೆ ಸಂಖ್ಯೆ 27:1 ರಲ್ಲಿನ 4 ಎಕರೆ 10 ಗುಂಟೆಗಳ ಪ್ರದೇಶದಲ್ಲಿ ರೂ.37.48 ಲಕ್ಷಗಳ ವೆಚ್ಚದಲ್ಲಿ ಒಂದು ನೂತನ ಘಟಕವನ್ನು ನಿರ್ಮಿಸಿ 1988 ರ ಮಾರ್ಚ್ ತಿಂಗಳಲ್ಲಿ ಪ್ರಾರಂಭಿಸಲಾಯಿತು. ಹೊಸ ಘಟಕಕ್ಕೆ ಹೊಂದಿಕೊಂಡಂತೆ ಬೀದರ್ - ಉದ್ಗೀರ್ ರಸ್ತೆಗೆ ಹೊಂದಿಕೊಂಡಿರುವ 3 ಎಕರೆ 30 ಗುಂಟೆ ಜಮೀನಿನಲ್ಲಿ ರೂ. 49.46 ಲಕ್ಷಗಳ ವೆಚ್ಚದಲ್ಲಿ ಒಂದು ಮಾದರಿ ಸುಸಜ್ಜಿತ ಬಸ್ ನಿಲ್ದಾಣವನ್ನೂ ನಿರ್ಮಿಸಲಾಯಿತು. ಹಳೆ ಬಸ್ ನಿಲ್ದಾಣದ ವಿಸ್ತೀರ್ಣ ಒಂದು ಎಕರೆ ಇದ್ದರೆ ಹೊಸ ನಿಲ್ದಾಣದ ವಿಸ್ತೀರ್ಣ 3 ಏಕರೆ ಮತ್ತು 30 ಗುಂಟೆಗಳು. ಈ ಬಸ್ ನಿಲ್ದಾಣವನ್ನು ದಿನಾಂಕ 1-2-95ರಂದು ಪ್ರಾರಂಭಿಸಲಾಗಿದೆ. ಹೊಸ ಬಸ್ ನಿಲ್ದಾಣ ಮತ್ತು ಹಳೆಯ ಬಸ್ ನಿಲ್ದಾಣದ ನಡುವಿನ ಅಂತರಸುಮಾರು 1.5 ಕಿ.ಮಿ ಗಳಾಗುವುದು.

ಹೊಸ ಬಸ್ ನಿಲ್ದಾಣದಿಂದ ಈಗ 375 ಬಸ್ಸುಗಳು ಹೊರಡುತ್ತಿದ್ದು ಆ ಪೈಕಿ 200 ಬಸ್ಸುಗಳು, ಬೀದರ್ ಉತ್ತರ ಮತ್ತು ಪೂರ್ವ ಭಾಗಗಳಿಗೆ ಹೋಗುತ್ತಿರುವುವು. ಹಾಗೂ 175 ಬಸ್ಸುಗಳು ಪಶ್ಚಿಮ ಭಾಗಕ್ಕೆ ಹೋಗುತ್ತಿರುವುವು. ಉತ್ತರ ಮತ್ತು ಪೂರ್ವ ಭಾಗಗಳಿಗೆ ಸಂಚರಿಸುವ ಬಸ್ಸುಗಳು ಬಸ್ ನಿಲ್ದಾಣಕ್ಕೆ ಸಮೀಪದಲ್ಲಿ ಹಾದು ಹೋಗುತ್ತಿವೆ ಮತ್ತು ಅವುಗಳಿಗೆ ಹಳೆಯ ಬಸ್ ನಿಲ್ದಾಣದ ಹತ್ತಿರ ನಿಲುಗಡೆಯನ್ನು ಒದಗಿಸಲಾಗಿದೆ. ಸದರೀ ಬಸ್ಸುಗಳ ವಿವರಗಳು ಈ ಕೆಳಗಿನಂತಿವೆ.

ವಲಯ	ಸಾರಿಗೆಗಳ ಸಂಖ್ಯೆ
ಔರಾದ್	127
ಜಹಿರಾಬಾದ್	37
ಮನ್ನಾ-ಎಖೇಳಿ	28
ಮನಹಳ್ಳಿ	9
ಚಿಲ್ಲರಗಿ	5
ಒಟ್ಟು	200

ಈ ಬಸ್ಸುಗಳು ಹಳೆ ಬಸ್ ನಿಲ್ದಾಣಕ್ಕೆ ಸಮೀಪದಲ್ಲಿ ಹಾದು ಹೋಗುತ್ತಿರುವುದರಿಂದ ಪ್ರಯಾಣಿಕ ವರ್ಗಕ್ಕೆ ಯಾವ ವಿಧವಾದ ಅನಾನುಕೂಲವೂ ಉಂಟಾಗುತ್ತಿರುವುದಿಲ್ಲ.

ಉಳಿದ 175 ಬಸ್ಸುಗಳು ಬೀದರ್‌ನ ಪಶ್ಚಿಮ ಭಾಗದ ಕಡೆ ಕಾರ್ಯಾಚರಣೆ ಮಾಡುತ್ತಿದ್ದು ಅವುಗಳ ವಿವರ ಈ ಕೆಳಗಿನಂತಿವೆ.

ವಲಯ	ಸಾರಿಗೆಗಳ ಸಂಖ್ಯೆ
ಬಸವ ಕಲ್ಯಾಣ	48
ಹುಮ್ನಾಬಾದ್	47
ಗುಲ್ಬರ್ಗಾ	38
ಭಾಲ್ಕಿ	27
ಹೈದ್ರಾಬಾದ್	11
ಚಿಂಚೋಳಿ	4

ಮೇಲಿನ ಬಸ್ಸುಗಳು ಹಳೆ ಬಸ್ ನಿಲ್ದಾಣದ ಮೂಲಕ ಸಂಚರಿಸುವಂತೆ ಮಾಡಿದಲ್ಲಿ ನಗರದ ರಸ್ತೆಗಳಲ್ಲಿ ಹೆಚ್ಚಿನ ಕಿಷ್ಕಿಂದ ಉಂಟಾಗುವುದಲ್ಲದೆ ಪ್ರತಿಯೊಂದು ಬಸ್ಸು ಮೂರು ನಿರುಪಯುಕ್ತ ಕಿಲೋಮೀಟರುಗಳನ್ನು ಕ್ರಮಿಸಬೇಕಾಗುತ್ತದೆ ಮತ್ತು ಹೊಸ ಬಸ್ ನಿಲ್ದಾಣದಲ್ಲಿ ಬಸ್ಸುಗಳಿಗೆ ಹತ್ತುವ ಪ್ರಯಾಣಿಕರ ಅನುಕೂಲಕ್ಕಾಗಿ ಹಳೆ ಬಸ್ ನಿಲ್ದಾಣ ಮತ್ತು ಹೊಸ ಬಸ್ ನಿಲ್ದಾಣಗಳ ನಡುವೆ 2 ಪ್ರತ್ಯೇಕ ಬಸ್ಸುಗಳನ್ನು ಓಡಿಸಲಾಗುತ್ತಿದೆ. ಅವು ಬೆಳಗ್ಗೆ 0600 ಘಂಟೆಯಿಂದ ರಾತ್ರಿ 0930 ಘಂಟೆಯವರಿಗೆ ಪ್ರತಿ ದಿಕ್ಕಿನಲ್ಲಿ 30 ಸುತ್ತುಗಳ ಕಾರ್ಯಚರಣೆ ಮಾಡುತ್ತಿವೆ.

ಆದುದರಿಂದ ಪ್ರಯಾಣಿಕರು ತ್ರಿಚಕ್ರ ವಾಹನಗಳು, ಟಾಂಗಾಗಳು ಮುಂತಾವ ವೆಚ್ಚದಾಯಕವಾದ ಇತರೆ ಸ್ಥಳೀಯ ಸಾರಿಗೆ ಮಾಧ್ಯಮಗಳನ್ನು ಅವಲಂಬಿಸುವ ಅವಶ್ಯಕತೆ ಇರುವುದಿಲ್ಲ. ಈ ವ್ಯವಸ್ಥೆಯಿಂದಾಗಿ ಹೊಸ ಬಸ್ ನಿಲ್ದಾಣಕ್ಕೆ ಹೋಗಲು ಪ್ರಯಾಣಿಕರಿಗೆ ಯಾವುದೇ ರೀತಿಯ ತೊಂದರೆ ಇರುವುದಿಲ್ಲ.

ಎಲ್ಲಾ ಬಸ್ಸುಗಳು ಹಳೆಯ ಬಸ್ ನಿಲ್ದಾಣದ ಮುಖಾಂತರ ಸಂಚರಿಸುವಂತೆ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸಿ ಒಂದು ವರ್ಗದ ಜನರು ಚಳುವಳಿ ಮಾಡಿದ್ದರು. ಮತ್ತು ದಿನಾಂಕ 20-2-95 ರಂದು ಕೆಲವು ವ್ಯಕ್ತಿಗಳು ಧರಣಿ ಆಚರಿಸಿದರು. ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೋಲೀಸ್ ಅಧಿಕಾರಿಗಳಂತಹ ಸ್ಥಳೀಯ ವರಿಷ್ಠರಿಗೂ ಮತ್ತು ಇತರ ಸ್ಥಳೀಯ ನಾಯಕರುಗಳಿಗೂ ವ್ಯವಸ್ಥೆಯನ್ನು ವಿವರಿಸಿದ ನಂತರ ಧರಣಿಯನ್ನು ಹಿಂತೆಗೆದುಕೊಳ್ಳಲಾಯಿತು.

ಹೊಸ ಬಸ್ ನಿಲ್ದಾಣದಲ್ಲಿ ಆಧುನಿಕ ಸೌಲಭ್ಯಗಳನ್ನು ಒದಗಿಸಲಾಗಿದೆ ಮತ್ತು ಅದು ಹೆಚ್ಚು ವಿಶಾಲವಾಗಿದ್ದು ಪ್ರಯಾಣಿಕರುಗಳಿಗೆ ಹೆಚ್ಚಿನ ಆಸನಗಳ ಸೌಲಭ್ಯವನ್ನು ಒದಗಿಸಲಾಗಿದೆ. ಎಲ್ಲಾ ಬಸ್ಸುಗಳು ಹಳೇ ಬಸ್ ನಿಲ್ದಾಣವನ್ನು ಸಂಪರ್ಕಿಸುವಂತೆ ಕ್ರಮ ಕೈಗೊಂಡಲ್ಲಿ ಅದರಿಂದ ನಗರದ ರಸ್ತೆಗಳಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗಿ ಕಿಷ್ಕಿಂದವಾಗುವುದಲ್ಲದೆ ಹೊಸ ಬಸ್ ನಿಲ್ದಾಣದಲ್ಲಿ ಬಸ್ಸುಗಳಿಗೆ ಹತ್ತಿದ ಪ್ರಯಾಣಿಕರುಗಳಿಗೆ ಅನಾನುಕೂಲ ಉಂಟಾಗುತ್ತದೆ. ಹಾಗೂ ಒಂದು ಸುಸಜ್ಜಿತ ಬಸ್ ನಿಲ್ದಾಣವನ್ನು ನಿರ್ಮಿಸಿದ ಉದ್ದೇಶ ವಿಫಲವಾಗುವುದು. ಆದುದರಿಂದ ಎಲ್ಲಾ ಬಸ್ಸುಗಳಿಗೂ ಬೀದರ್‌ನ ಹಳೆಯ ಬಸ್ ನಿಲ್ದಾಣದ ಮಾರ್ಗವಾಗಿ ಸಂಚರಿಸುವ ವ್ಯವಸ್ಥೆ ಅಗತ್ಯವಿಲ್ಲ ಎಂದು ನಿರ್ಧರಿಸಲಾಗಿದೆ.

12.20. ಪಿ.ಎಂ

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ಸನ್ಮಾನ್ಯ ಅಧ್ಯಕ್ಷರೆ, ಅಲ್ಲಿರುವ ಹಳೆಯ ಬಸ್ ನಿಲ್ದಾಣಕ್ಕೂ ಹೊಸ ಬಸ್ ನಿಲ್ದಾಣಕ್ಕೂ ಸುಮಾರು ನಾಲ್ಕು ಕಿಲೋ ಮೀಟರ್‌ಗಳಷ್ಟು ವ್ಯತ್ಯಾಸವಿದೆ. ಬಸ್ಸುಗಳು ಹಳೆಯ ಬಸ್ ನಿಲ್ದಾಣದ ಮೂಲಕ ಬರಲು ಕಾನೂನು ಮತ್ತು ಸುವ್ಯವಸ್ಥೆಯ ತೊಂದರೆಯಿದೆ. ಅಲ್ಲಿ ಎಲ್ಲಾ ಪಕ್ಷದವರು ಸೇರಿಕೊಂಡು ಒಂದು ಆ್ಯಕ್ಷನ್ ಕಮಿಟಿ ಮಾಡಿಕೊಂಡಿದ್ದು, ವಿಷಯ ಜನರ ಪರವಾಗಿದೆ. ತಾವು ಇದನ್ನು ಸುಮ್ಮನೆ ಪ್ರತಿಷ್ಠೆಯ ವಿಷಯವಾಗಿರಿಸಿಕೊಂಡರೆ ತುಂಬಾ ತೊಂದರೆಯಾಗುತ್ತದೆ. ಅಲ್ಲಿಗೆ ಸಿಟಿ ಬಸ್ಸುಗಳನ್ನು ಏಕೆ ಹಾಕಿದ್ದೀರಿ? ಆ ಸಿಟಿ ಬಸ್ಸುಗಳು ಬೇರೆ ಊರುಗಳಿಗೆ ಹೋಗುತ್ತವೆ. ಹಳೆಯ ಬಸ್ ನಿಲ್ದಾಣಕ್ಕೆ ಹೋಗಲು ಸರಿಯಾದ ಬಸ್ ಸೌಕರ್ಯವಿಲ್ಲದಿರುವುದರಿಂದ ಆಟೋರಿಕ್ಷಾದಲ್ಲಿ ಪ್ರಯಾಣಿಸಿದರೆ ಕನಿಷ್ಠ 20 ರೂಪಾಯಿಗಳಾಗುತ್ತದೆ. ಬಡವರು ಇಷ್ಟು ಹಣ ತೆತ್ತು ಹೋಗುವುದಕ್ಕಾಗುವುದಿಲ್ಲ. ಅಲ್ಲದೆ, ಹಳೆಯ ಬಸ್ ನಿಲ್ದಾಣದ ಹತ್ತಿರ ಜಿಲ್ಲಾಧಿಕಾರಿಗಳ ಕಛೇರಿ, ರೈಲ್ವೆ ನಿಲ್ದಾಣ ಮುಂತಾದ ಪ್ರಮುಖ ಕಛೇರಿಗಳಿಲ್ಲವೂ ಅಲ್ಲಿಯೇ ಇರುವುದರಿಂದ ಜನರ ದಿನನಿತ್ಯ ಚಟುವಟಿಕೆಗಳಿಗೆ ತೊಂದರೆಯಾದಂತೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್.ಬೀಳಗಿ : ಮಾನ್ಯ ಅಧ್ಯಕ್ಷರೆ, ಅಲ್ಲಿರುವ ಹಳೆಯ ಬಸ್ ನಿಲ್ದಾಣ ಮತ್ತು ಹೊಸ ಬಸ್ ನಿಲ್ದಾಣಗಳ ಪರಿಸ್ಥಿತಿಯನ್ನು ತಮ್ಮ ಗಮನಕ್ಕೆ ತರುವುದಾದರೆ ಮಾನ್ಯ ಸದಸ್ಯರು ಹೇಳಿದಂತೆ ವ್ಯವಸ್ಥೆ ಮಾಡಲು ಕಷ್ಟವಾಗುತ್ತದೆ ಮತ್ತು ಅನಾನುಕೂಲವಾಗುತ್ತದೆ. ಅಲ್ಲಿ ಹಳೆಯ ಬಸ್ ನಿಲ್ದಾಣ ಪೂರ್ವಕ್ಕಿದ್ದು, ಪಶ್ಚಿಮಕ್ಕೆ ಹೊಸ ಬಸ್ ನಿಲ್ದಾಣವಿದೆ. ಇದರ ನಡುವಿನ ಅಂತರ ಒಂದೂವರೆ ಕಿಲೋಮೀಟರ್ ಇದೆ. ಈಗಾಗಲೇ ನಾನು ಹೇಳಿಕೆಯಲ್ಲಿ ತಿಳಿಸಿದಂತೆ ಸುಮಾರು 200 ಬಸ್‌ಗಳು ಹೊಸ ಬಸ್ ನಿಲ್ದಾಣದಿಂದ ಹೊರಟು ಪೂರ್ವಕ್ಕಿರುವ ಹಳೆಯ ಬಸ್ ನಿಲ್ದಾಣ ತಲುಪಿ ಅಲ್ಲಿಂದ ಬೇರೆ ಬೇರೆ ಗ್ರಾಮಗಳಿಗೆ ತೆರಳುತ್ತಿವೆ. ಇಲ್ಲಿಂದ ಎಷ್ಟು ಬಸ್‌ಗಳು ಹೋಗುತ್ತದೆ ಎಂಬುದರ ಬಗ್ಗೆಯೂ ವಿವರಣೆ ಕೊಟ್ಟಿದ್ದೇನೆ. ಇವರ ಬೇಡಿಕೆ ಏನೆಂದರೆ ಪಶ್ಚಿಮ ಮಾರ್ಗವಾಗಿ ಹೋಗುವ ಬಸ್ಸುಗಳೂ ಸಹ ಪೂರ್ವಕ್ಕಿರುವ ಹಳೆಯ ಬಸ್ ನಿಲ್ದಾಣ ತಲುಪಿ ಅಲ್ಲಿಂದ ಹಳ್ಳಿಗಳಿಗೆ ಹೋಗಬೇಕೆಂದು.ಅಂದರೆ ಒಂದೂವರೆ ಕಿ.ಮಿ ಮತ್ತೆ ಒಂದೂವರೆ ಕಿ.ಮಿ ಒಟ್ಟು ಮೂರು ಕಿ.ಮಿ ಹೆಚ್ಚಾಗುತ್ತದೆ. ಇಷ್ಟಲ್ಲದೆ ಹೊಸ ಬಸ್ ಸ್ಟ್ಯಾಂಡ್ ಪ್ರವೇಶಿಸುವುದಕ್ಕೋಸ್ಕರ..

ಶ್ರೀ ಗುರುಪಾದಪ್ಪನಾಗಮಾರಪಳ್ಳಿ : ನಾವು ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ನಮಗೆ ಅಲ್ಲಿ ಸಮಸ್ಯೆ ಇದೆ. ನಾನು ಇದಕ್ಕೆ ಸಹಿ ಮಾಡಿಲ್ಲ. ಆದ್ದರಿಂದ ಇಂದು ಮಾತನಾಡಲು ಬರುವುದಿಲ್ಲ. ಈಗ ಜಿಲ್ಲೆಯಲ್ಲಿ ಸತ್ಯಾಗ್ರಹ ಕುಳಿತಿದ್ದಾರೆ. ತೊಂದರೆ ಇದೆ. ಇದನ್ನು ಪರಿಹಾರ ಮಾಡಬೇಕು. ಇಲ್ಲದಿದ್ದರೆ ತೊಂದರೆಯಾಗುತ್ತದೆ.

ಅಧ್ಯಕ್ಷರು : ನಿಮ್ಮ ಜಿಲ್ಲಾ ಶಾಸಕರು ಮತ್ತು ಮಂತ್ರಿಗಳು ನಮ್ಮಕಛೇರಿಗೆ ಬಂದರೆ ಪರಿಹಾರ ಮಾಡುತ್ತೇವೆ.

ಶ್ರೀ ಕೆ.ಎಸ್. ಬೀಳಗಿ: ನಾನು ಮಾನ್ಯ ಸದಸ್ಯರುಗಳಿಗೆ ಈಗಾಗಲೇ ಹೇಳಿದ್ದೇನೆ. ನಾನು ಸಧ್ಯದಲ್ಲಿಯೇ ಬೀದರ್‌ಗೆ ಹೋಗುತ್ತಿದ್ದೇನೆ. ಅಲ್ಲಿಗೆ ನಾನು ಹೋದಾಗ ಮಾನ್ಯ ಸದಸ್ಯರುಗಳನ್ನೆಲ್ಲಾ ಕರೆದು ಅದನ್ನು ಪರಿಶೀಲನೆ ಮಾಡಿ ಚರ್ಚೆ ಮಾಡಿ ಇದನ್ನು ಪರಿಹಾರ ಮಾಡಲು ಪ್ರಯತ್ನಪಡುತ್ತೇನೆ.

ಅಧ್ಯಕ್ಷರು : ಅದು ಒಳ್ಳೆಯ ಕೆಲಸ. ತಾವು ಸ್ಥಳಕ್ಕೆ ಹೋಗಿ ಪರಿಹಾರ ಮಾಡುತ್ತೇನೆಂದು ಹೇಳುತ್ತಿದ್ದಾರೆ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ಹಳೆಯ ಬಸ್ ಸ್ಟ್ಯಾಂಡ್‌ಗೆ ಯಾವ ಬಸ್ಸುಗಳೂ ಸಹ ಬರುವುದ್ದಿಲ ಅವರು ಮಾಡುತ್ತಿರುವುದು ತಪ್ಪು ಸ್ಟೇಟ್‌ಮೆಂಟ್ ಅವರ ಅಧಿಕಾರಿಗಳು ಈ ರೀತಿಯ ಹೇಳಿಕೆ ಕೊಟ್ಟು ಸಚಿವರನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ಅಧಿಕಾರಿಗಳಿಗೆ ಮಿಸ್‌ಗೈಡ್ ಮಾಡುತ್ತಿದ್ದಾರೆ. ಅಲ್ಲಿ ಇರುವ ತೊಂದರೆಯ ಬಗ್ಗೆ ನಮ್ಮ ಭಾಗದ ಉಸ್ತುವಾರಿ ಸಚಿವರು ಮತ್ತು ಸಾರಿಗೆ ಸಚಿವರು ಪರಿಹಾರ ಮಾಡಿಕೊಡುತ್ತೇವೆಂದು ಬರವಣಿಗೆಯಲ್ಲಿ ಬರೆದು ಕೊಡಲಿ. ಇದರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇದೆಯೇ ಎಂದು ಕೇಳಬಯಸುತ್ತೇನೆ.

ಅಧ್ಯಕ್ಷರು : ಸಾರಿಗೆ ಸಚಿವರು ಬೀದರ್‌ಗೆ ಹೋಗಿ ನಿಮ್ಮಗಳನ್ನು ಜೊತೆಯಲ್ಲಿ ಇಟ್ಟುಕೊಂಡು ಸ್ಥಳವನ್ನು ಪರಿಶೀಲನೆ ಮಾಡಿ ನಿಮ್ಮೊಂದಿಗೆ ಚರ್ಚೆ ಮಾಡಿ ನಿಮ್ಮ

ಸಮಸ್ಯೆಯೇನಿದೆ ಅದನ್ನು ಪರಿಹಾರ ಮಾಡುತ್ತಾರೆ. ಈ ಅಧಿವೇಶನ ಮುಗಿದ ತಕ್ಷಣ ಆ ಕೆಲಸವನ್ನು ಮಾಡುತ್ತಾರೆ. ಅಲ್ಲಿಗೆ ಬಂದು ಪರಿಶೀಲನೆ ಮಾಡಿ ಪರಿಹಾರ ಮಾಡುತ್ತಾರೆ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ನಮ್ಮಲ್ಲಿ ಬಹಳ ತೊಂದರೆ ಇದೆ. ಒಂದು ವಾರದಲ್ಲಿ ಪರಿಹಾರ ಮಾಡುತ್ತೇವೆಂದು ಉಸ್ತುವಾರಿ ಸಚಿವರು ಹೇಳಿದ್ದಾರೆ. ಆ ರೀತಿ ಮಾಡದಿದ್ದರೆ ಇಲ್ಲಿ ರಾಜಕೀಯವನ್ನು ಮಾಡಲು ಪ್ರಯತ್ನ ಮಾಡಿದಂತಾಗುತ್ತದೆ.

ಶ್ರೀ ಗುರುಪಾದಪ್ಪನಾಗಮಾರಪಳ್ಳಿ : ಇವತ್ತೇ ಎಲ್ಲಾ ಶಾಸಕರುಗಳನ್ನು ಕರೆದು ಒಪ್ಪಂದ ಮಾಡಿದರೆ ಒಳ್ಳೆಯದು.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ಇದರ ಬಗ್ಗೆ ಉಸ್ತುವಾರಿ ಸಚಿವರು ಹೇಳಲಿ. ಆದರೆ ಇದರ ಬಗ್ಗೆ ಬರೆದುಕೊಟ್ಟಿದ್ದಾರೆ.

ಅಧ್ಯಕ್ಷರು : ಇವತ್ತು ಮಧ್ಯಾಹ್ನ ಸಾರಿಗೆ ಸಚಿವರು ಅವರ ಕಛೇರಿಗೆ ತಮ್ಮಗಳೆಲ್ಲರನ್ನು ಕರೆದು ಮಾತನಾಡುತ್ತಾರೆ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : (ಉರ್ದುವಿನಲ್ಲಿ ಮಾತನಾಡಿದರು)

ಶ್ರೀ ವಾಟಾಳ್ ನಾಗರಾಜ್ : ಇದು ಅರ್ಥವಾಗದ ಭಾಷೆ.

ಅಧ್ಯಕ್ಷರು : ದಯವಾಡಿ ಕುಳಿತುಕೊಳ್ಳಿ, ಅವರು ಕನ್ನಡದಲ್ಲಿ ಮಾತನಾಡುತ್ತಿದ್ದರು. ಆದರೆ ಸರಿಯಾಗಿ ವಿಷಯವನ್ನು ಹೇಳಲು ಆಗುತ್ತಿಲ್ಲವಾದರಿಂದ ಆ ರೀತಿ ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ನಮಗೆ ನಮ್ಮ ಭಾಷೆಯಲ್ಲಿ ಸ್ವಲ್ಪ ಮಾತನಾಡಲು ಅವಕಾಶ ಮಾಡಿಕೊಡಿ. ನಾವು ಇಲ್ಲಿ ಏಕೆ ಬಂದಿದ್ದೇವೆ? ನಮ್ಮ ಮನಸ್ಸಿನಲ್ಲಿರುವ ವಿಚಾರಗಳನ್ನು ಸುಮ್ಮನೆ ಇಟ್ಟುಕೊಂಡು ಮುಖರಂತೆ ಇಲ್ಲಿ ಕುಳಿತುಕೊಳ್ಳಬೇಕೇ? ನಮ್ಮ ಸಮಸ್ಯೆಯನ್ನು ಇಲ್ಲಿ ಹೇಗೆ, ಹೇಳಬೇಕು. ನಮ್ಮ ಭಾಗದಲ್ಲಿ ಕಾನೂನು ಸುವ್ಯವಸ್ಥೆ ಸಮಸ್ಯೆ ಇದೆ.

(ಉರ್ದುವಿನಲ್ಲಿ ಮಾತನಾಡಿದರು)

ಅಧ್ಯಕ್ಷರು : ಹಷ್ಮಿಯವರೇ, ದಯಮಾಡಿ ಕುಳಿತುಕೊಳ್ಳಿ. ನಾನು ಇಲ್ಲಿ ತಮ್ಮ ಜೊತೆಗೆ ಉರ್ದುವಿನಲ್ಲಿ ಮಾತನಾಡಲಾಗುವುದಿಲ್ಲ. ತಮ್ಮ ಭಾಗಕ್ಕೆ ಬಂದಾಗ ಮಾತನಾಡುತ್ತೇನೆ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ನಮಗೆ ತೊಂದರೆಯಾಗಿದೆ. ಅದನ್ನು ಇಂಥ ಸಮಯದಲ್ಲಿ ಅಥವಾ ಇಂಥ ದಿನಾಂಕದೊಳಗೆ ಪರಿಹಾರ ಮಾಡಿಕೊಡುತ್ತೇವೆಂದು ಹೇಳಬೇಕು.

ಅಧ್ಯಕ್ಷರು : ಇವತ್ತೇ ಸಾರಿಗೆ ಸಚಿವರು ನಿಮ್ಮ ಜಿಲ್ಲೆಯ ಶಾಸಕರುಗಳನ್ನು ಅವರ ಕಛೇರಿಗೆ ಕರೆಸುತ್ತಾರೆ, ನೀವು ಇಲ್ಲ ಏನೇನು ವಿಚಾರಗಳನ್ನು ಹೇಳಬೇಕೆಂದಿದ್ದೀರೋ ಅದನ್ನು ಅಲ್ಲಿ ಹೇಳಿ. ತಾವುಗಳೆಲ್ಲರೂ ಕುಳಿತುಕೊಂಡು ಒಟ್ಟಿಗೆ ಚರ್ಚೆ ಮಾಡಿ ಇದಕ್ಕೆ ಪರಿಹಾರ ಕಂಡುಕೊಳ್ಳಬೇಕು.